# ಮರೆಯಾಗುತ್ತಿದೆ ಮಣ್ಣಡಿಕೆ

**ಮಣ್ಣಡಿಕೆ  ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸಹಜವಾಗಿ ಬೆಳೆಯುವ ಕಾಡುಹಣ್ಣು. ಹಲವಾರು ಔಷಧೀಯ ಗುಣಗಳನ್ನು ಹೊಂದಿದ ಈ ಹಣ್ಣು ಇಂದು ಅಳಿವಿನ ಅಂಚಿನಲ್ಲಿದೆ.**

■ ಚಿತ್ರ ಬರಹ:
**ಸಹನಾ ಕಾಂತಬೈಲು**



**ಚಿ**ಕ್ಕವಳಿದ್ದಾಗ ನನ್ನ ಅಮ್ಮ ಹೊಟ್ಟೆಯಲ್ಲಿ ಹುಳ ತುಂಬಿದರೆ ಪೇಟೆಯಿಂದ ಔಷಧ ತರುತ್ತಿರಲಿಲ್ಲ. ಬದಲಾಗಿ ಮಣ್ಣಡಿಕೆ ಹಣ್ಣುಗಳನ್ನು ತಿನ್ನಲು ಕೊಡುತ್ತಿದ್ದಳು. ಅವನ್ನು ತಿಂದರೆ ಮರುದಿನ ಮಲದೊಂದಿಗೆ ಹುಳ ಹೊರಗೆ ಬೀಳುತ್ತಿತ್ತು. ಇಂದಿನ ಮಕ್ಕಳಿಗೆ ಈ ಅನುಭವ ಇರಲಿಕ್ಕಿಲ್ಲ. ಅಷ್ಟೇ ಏಕೆ, ಇಂದಿನ ಅಮ್ಮಂದಿರಿಗೂ ಈ ಹಣ್ಣಿನ ಪರಿಚಯ ಇರಲಿಕ್ಕಿಲ್ಲ. ಕಾಡು ದೊಡ್ಡ ಪ್ರಮಾಣದಲ್ಲಿ ನಾಶವಾಗಿರುವುದೂ ಇದಕ್ಕೆ ಒಂದು ಕಾರಣ.

ಮಣ್ಣಡಿಕೆ  ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸಹಜವಾಗಿ ಬೆಳೆಯುವ ಕಾಡುಹಣ್ಣು. ಇದಕ್ಕೆ ಚಳ್ಳೆ ಹಣ್ಣು ಎಂಬ ಹೆಸರೂ ಇದೆ. ಇದನ್ನು ಇಂಗ್ಲಿಷ್‌ನಲ್ಲಿ 'ಸೆಬಸ್ಟಿಯನ್ ಪ್ಲಮ್' ಎಂದು ಕರೆಯುತ್ತಾರೆ. ಸಸ್ಯಶಾಸ್ತ್ರೀಯ ಹೆಸರು ಕಾರ್ಡಿಯಾ ಮಿಕ್ಸಾಲಿನ್. ಇದು ಬೊರಾಗಿನೇಸಿ ಕುಟುಂಬಕ್ಕೆ ಸೇರಿದೆ.

ಮರ 8–10 ಮೀಟರ್ ಎತ್ತರಕ್ಕೆ ಬೆಳೆಯಬಲ್ಲದು. ರೆಂಬೆಗಳಲ್ಲಿ ಅಂಡಾಕಾರದ ಚೂಪು ತುದಿಯ ದಟ್ಟ ಹಸಿರು ಎಲೆಗಳು, ಚಿಕ್ಕ ಬಿಳಿ ಹೂಗೊಂಚಲು, ಹೊಳಪಿನ ಹಸಿರು ಕಾಯಿಗಳು ಪಕ್ವಗೊಂಡು ಬಂಗಾರ ಬಣ್ಣದ ಹಣ್ಣಾಗುತ್ತವೆ. ಗೋಲಿ ಗಾತ್ರದ, ದಪ್ಪ ಸಿಪ್ಪೆಯ ಹಣ್ಣಿನ ಒಳಗೆ ಕಡಲೆ ಗಾತ್ರದ ಗಟ್ಟಿ ಬೀಜ. ಬೀಜದ ಸುತ್ತ ಸಿಹಿ ಅಂಟಿನ ತಿರುಳು. ಇದು ತಿನ್ನಲು ಯೋಗ್ಯ. ಸಿಪ್ಪೆ ಹಿಚುಕಿ ಇಡಿಯಾಗಿ ಬಾಯಿಗೆ ಹಾಕಿಕೊಂಡು ಸಿಹಿಯನ್ನು ಸವಿದು ಬೀಜವನ್ನು ಉಗುಳಬೇಕು. ಬಾಯೆಲ್ಲಾ ಅಂಟು ಅಂಟಾದರೂ ಒಂದು ಹಣ್ಣು ತಿಂದರೆ ಅಪೂರ್ವ ರುಚಿಯಿಂದಾಗಿ ಮತ್ತಷ್ಟು ತಿನ್ನಬೇಕೆನಿಸುತ್ತದೆ. ಹಳ್ಳಿಗಾಡಿನ ಮಕ್ಕಳಿಗೆ ಈ ಹಣ್ಣೆಂದರೆ ಪ್ರಾಣ. ಪಶು, ಪಕ್ಷಿಗಳಿಗೂ ಪ್ರಿಯ. ಜೂನ್‌ನಿಂದ ಆಗಸ್ಟ್ ತಿಂಗಳು ಹಣ್ಣು ದೊರೆಯುವ ಕಾಲ.

**(8ನೇ ಪುಟ ನೋಡಿ)**